(ಇಂದು ದಿನಾಂಕ:26-03-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಎದುರುದಾರ ನಂ.3 ರವರ ಪರ ಶ್ರೀ ಎಸ್ ಎನ್ ಎಮ್ ವಕೀಲರಿಂದ.**

1. ನಾನು ಈಗ ಯಾವುದೇ ಕೆಲಸ ಮಾಡುತ್ತಿಲ್ಲ. ಅಪಘಾತವಾಗಿ 2022 ರಲ್ಲಿ ಆಗಿರುತ್ತದೆ. ಆ ದಿನ ನಾನು ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದೆ, ಸದರಿ ಮೋ.ಸೈ. ಸಂಖ್ಯೆ ನನಗೆ ಗೊತ್ತಿಲ್ಲ. ನನಗೆ ವಾಹನ ಚಾಲನಾ ಪರವಾನಿಗೆ ಇರುತ್ತದೆ. ಅಪಘಾತದ ದಿನ ಅದು ಕಳೆದು ಹೋಗಿರುತ್ತದೆ. ನನಗೆ ಯಾವುದೇ ವಾಹನ ಚಾಲನಾ ಪರವಾನಿಗೆ ಇರುವುದಿಲ್ಲ ಎಂದರೆ ಸರಿಯಲ್ಲ. ವಾಹನ ಚಾಲನಾ ಪರವಾನಿಗೆಯ ದ್ವಿಪ್ರತಿಯನ್ನು ಸಹ ನಾನು ಪಡೆದಿರುವುದಿಲ್ಲ ಮತ್ತು ನ್ಯಾಯಾಲಯಕ್ಕೆ ಹಾಜರಪಡಿಸಿರುವುದಿಲ್ಲ. ಲೈಸನ್ಸ್ ನಂಬರ ನನಗೆ ಗೊತ್ತಿಲ್ಲ. ಮೋ.ಸೈ. ಸಂಖ್ಯೆ ಕೆಎ 36 ಇಪಿ 7362 ಇದು ನನ್ನ ಅಣ್ಣನ ಮಾಲೀಕತ್ವದಲ್ಲಿ ಇರುತ್ತದೆ. ಸದರಿ ವಾಹನಕ್ಕೆ ಇನ್ಸೂರೆನ್ಸ್ ಇರುತ್ತದೆ. ಸದರಿ ಅರ್ಜಿಯಲ್ಲಿ ನನ್ನ ಅಣ್ಣನನ್ನು ಮತ್ತು ವಿಮಾ ಕಂಪನಿಯವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಹಾಗಾಗಿ ಅರ್ಜಿ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.
2. ಅಪಘಾತದ ನಂತರ ನಾನು ಸಿಂಧನೂರು ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ಸದರಿ ದಿನ ಆಸ್ಪತ್ರೆಗೆ ಪೋಲೀಸರು ಬಂದಿದ್ದರು, ಅವರಿಗೆ ಮಾಹಿತಿ ನೀಡಿದ ಬಗ್ಗೆ ನನಗೆ ಗೊತ್ತಿಲ್ಲ. ದೂರನ್ನು ನಮ್ಮ ತಾಯಿ ಸಲ್ಲಿಸಿರುತ್ತಾರೆ. ಅಪಘಾತವಾದ ಒಂದು ದಿನದ ನಂತರ ದೂರನ್ನು ಸಲ್ಲಿಸಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ಅಪಘಾತವು ಸಿಂಧನೂರು-ಮಸ್ಕಿ ರಸ್ತೆಯಲ್ಲಿ ಆಗಿರುತ್ತದೆ. ಸದರಿ ಅಪಘಾತವು ನನ್ನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಸಿಂಧನೂರು ಸರ್ಕಾರಿ ಆಸ್ಪತ್ರೆಯಿಂದ ಬಳ್ಳಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಹೋಗಿರುತ್ತೇನೆ, ಆದರೆ ಯಾವ ಆಸ್ಪತ್ರೆ ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ಪತ್ರೆಯಲ್ಲಿ ನನಗೆ ಶಸ್ತ್ರ ಚಿಕಿತ್ಸೆ ಮಾಡಿರುತ್ತಾರೆ. 1 ತಿಂಗಳ ನಂತರ ನಾನು ಬಳ್ಳಾರಿ ಆಸ್ಪತ್ರೆಯಿಂದ ಬಿಡುಗಡೆ ಆಗಿ ಬಂದಿರುತ್ತೇನೆ. ನಾನು ಸಂಪೂರ್ಣ ಗುಣಮುಖವಾಗಿ ಆಸ್ಪತ್ರೆಯಿಂದ ಬಿಡುಗಡೆ ಆಗಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಆಗಾಗ ಆಸ್ಪತ್ರೆಗೆ ಮುಂದುವರೆದ ಚಿಕಿತ್ಸೆಯನ್ನು

ಪಡೆಯಲು ವೈದ್ಯರು ಸಲಹೆ ನೀಡಿರುತ್ತಾರೆ. ಅಪಘಾತದ 6-7 ತಿಂಗಳ ನಂತರ ನಾನು ಶಾಂತಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಶಾಂತಿ ಆಸ್ಪತ್ರೆಯಲ್ಲಿ ಪಡೆದಂತಹ ಚಿಕಿತ್ಸೆ ಅಪಘಾತದಿಂದಾಗಿ ಆದ ಗಾಯಗಳಿಗೆ ಚಿಕಿತ್ಸೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಅಪಘಾತಕ್ಕಿಂತ ಮೊದಲೇ ಗಾಯಗಳಾಗಿದ್ದು, ಆ ಕಾರಣಕ್ಕಾಗಿ ಚಿಕಿತ್ಸೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ.

3. ನಾನು ಶಾಂತಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು, ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ಡಾ.ರಾಮಕೃಷ್ಣ ಆಸ್ಪತ್ರೆ ಗಂಗಾವತಿಯಲ್ಲಿ ಪಡೆದಿರುತ್ತೇನೆ ಎಂದರೆ, ಮುಂದುವರೆದ ಚಿಕಿತ್ಸೆಯನ್ನು ಡಾ.ರಾಮಕೃಷ್ಣ ಆಸ್ಪತ್ರೆ ಗಂಗಾವತಿಯಲ್ಲಿ ಪಡೆದಿದ್ದು ಅಲ್ಲಿಯೇ ಪಡೆದಿರುತ್ತೇನೆ ಎಂದುಸಾಕ್ಷಿ ನುಡಿಯುತ್ತಾರೆ. ಡಾ.ರಾಮಕೃಷ್ಣ ಆಸ್ಪತ್ರೆ ಗಂಗಾವತಿಯಲ್ಲಿ ನಾನು ಯಾವುದೇ ಶಸ್ತ್ರ ಚಿಕಿತ್ಸೆ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಹಾಗಾಗಿ ಈ ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ಪರಿಗಣಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಅಂಗನ್ಯೂನ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ.

4. ನಾನು ಬಳ್ಳಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯ ಬಿಲ್ಲುಗಳನ್ನು ಸೃಷ್ಟಿಸಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಕೇಲವು ಬಿಲ್ಲುಗಳನ್ನು ನಾನು ಕೈಯಿಂದ ಬರೆದು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಜರಪಡಿಸಿದ ವೈದ್ಯರ ಸಲಹಾ ಚೀಟಿಗಳಿಗೂ ಮತ್ತು ಬಿಲ್ಲುಗಳಿಗೆ ಹೊಂದಾಣಿಕೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ದೈಹಿಕವಾಗಿ ಆರೋಗ್ಯವಾಗಿರುತ್ತೇನೆ ಎಂದರೆ ಸರಿಯಲ್ಲ.

5. ನಾನು ಅಪಘಾತಕ್ಕಿಂತ ಮುಂಚೆ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಆದಾಯಕ್ಕೆ ಸಂಬಂಧಪಟ್ಟಂತೆ ನಾನು ಯಾವುದೇ ದಾಖಲೆಯನ್ನು ಸಲ್ಲಿಸಿಲ್ಲ ಎಂದರೆ ಸರಿ. ಅಪಘಾತವು ನನ್ನ ತಪ್ಪಿನಿಂದ ಆಗಿದ್ದು ಎದುರುದಾರ ನಂ.3 ರವರು ಪರಿಹಾರ ಕೊಡಲು ಬಾದ್ಯಸ್ಥರು ಅಲ್ಲ ಎಂದರೆ ಸರಿಯಲ್ಲ. ಎದುರುದಾರ ನಂ.1 ಇವರಿಗೆ ವಾಹನ ಚಾಲನಾ ಪರವಾನಿಗೆ ಇಲ್ಲದ ಕಾರಣ ಮತ್ತು ಪೋಲೀಸರು ದೋ.ಪ. ಸಲ್ಲಿಸಿದ್ದರಿಂದ ಎದುರುದಾರ ನಂ.3 ಇವರು ಪರಿಹಾರ

ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಎದುರುದಾರ ನಂ.1 ಮತ್ತು 2 ಇವರು ವಿಮಾ ಷರತ್ತುಗಳನ್ನು ಹಾಗೂ ಮೋ.ವಾ. ಕಾಯ್ದೆ ಉಲ್ಲಂಘನೆ ಮಾಡಿದ್ದರಿಂದ ಎದುರುದಾರ ನಂ.3 ಇವರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು,
ಸಿಂಧನೂರು.